(ii) ವಿಷಯ: ಶಾದಿ ಭಾಗ್ಯಯೋಜನೆ ಬಗ್ಗೆ

(ಗೊಂದಲ)

ಶ್ರೀ ಆರ್ ಅಶೋಕ್ ಮಾನ್ಯ ಅಧ್ಯಕ್ಷರೆ, ಶಾದಿಭಾಗ್ಯದ ಬಗ್ಗೆ ಚರ್ಚೆ ಮಾಡಲು ನಿಲುವಳಿ ಸೂಚನೆಯನ್ನು ಕೊಡಲಾಗಿದೆ, ದಯಮಾಡಿ,ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಸಿ.ಟಿ. ರವಿ. ಬಿದಾಯಿ ಯೋಜನೆಗೆ ವಿದಾಯ ಹೇಳಿ ಎಲ್ಲರಿಗೂ ಕೊಡಿ ಎಂದು ಪ್ರಸ್ತಾಪಿಸುತ್ತಿದೇವೆ.

(ಗೊಂದಲ)

ಅಧ್ಯಕ್ಷರು: ಸ್ವಲ್ಪ ನಾವು ಹೇಳುವುದನ್ನು ಕೇಳಿಸಿಕೊಳ್ಳಿ.

(ಗೊಂದಲ)

ಶ್ರೀ ಟಿ.ಬಿ ಜಯಚಂದ್ರ: (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ನಿಯಮ 60ರ ಅಡಿಯಲ್ಲಿ ಯಾವುದಾದರೂ ವಿಷಯವನ್ನು ಪ್ರಸ್ತಾಪ ಮಾಡಬೇಕಾದಾಗ ಅತ್ಯಂತ ಪ್ರಮುಖವಾದ ವಿಷಯವಾಗಿರಬೇಕು. ಪ್ರಸ್ತಾಪ ಮಾಡುವುದಕ್ಕಿಂತ ಹೆಚ್ಚಾಗಿ ಯಾವುದಾದರೂ ಒಂದು ಯೋಜನೆ ಸರ್ಕಾರದ ಯೋಜನೆಯಾಗಿರುವುದಿಲ್ಲ, ತಾವೇ ಸೃಷ್ಟಿ ಮಾಡಿಕೊಂಡಿರುವ ಯೋಜನೆಯ ಬಗ್ಗೆ adjournment motion ತರುತ್ತಾರೆಂದರೆ ಒಂದು ಕೆಟ್ಟ ಸಂಪ್ರದಾಯವಾಗುತ್ತದೆ. ಇವತ್ತು ಸದನದಲ್ಲಿ ಏನು ನಡೆಯುತ್ತಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ ಮಾನ್ಯ ವಿರೋಧ ಪಕ್ಷದವರಿಗೆ ನಿಲುವಳಿ ಸೂಚನೆ ತರುವುದಕ್ಕೆ ಅವಕಾಶವಿದೆ. ಆದರೆ ಭೂಮಿಯ ವಿಚಾರವನ್ನು ಕೂಡ ನಿಯಮ 60 ಅಡಿಯಲ್ಲಿ ಚರ್ಚೆಗೆ ತರುವುದೇ? ಅಥವಾ ಸರ್ಕಾರದ ಯೋಜನೆಯಲ್ಲೇ ಇಲ್ಲದಿರುವ ಆ ಯೋಜನೆಯನ್ನು ಕೂಡ ನಿಲುವಳಿ ಸೂಚನೆ ಮೂಲಕ ತರುತ್ತಾರೆಂದರೆ ಹೇಗೆ?

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್: ಕಳೆದ 5 ವರ್ಷಗಳಿಂದ ನೀವು ಎಂತೆಂಥ ವಿಚಾರಗಳನ್ನು ನಿಲುವಳಿ ಸೂಚನೆಯ ಮೂಲಕ ತಂದಿದ್ದೀರೋ ಅದೇ ದಾರಿಯಲ್ಲಿ ನಾವಿದ್ದೇವೆ.

(ಗೊಂದಲ)

ಅಧ್ಯಕ್ಷರು: ಅಶೋಕ್ ಅವರೆ, ದಯವಿಟ್ಟು ಅವಕಾಶವಿಲ್ಲ, ನಾನು ಹೇಳುತ್ತೇನೆ ಕೇಳಿ

ಶ್ರೀ ಟಿ.ಬಿ. ಜಯಚಂದ್ರ: ನೀವೇ ಹೆಸರು ಕೊಟ್ಟುಕೊಂಡಿರುವ ಯೋಜನೆಯಾಗಿದೆ, ಸರ್ಕಾರದ ಯೋಜನೆಯಲ್ಲ.

(ಗೊಂದಲ)

ಅಧ್ಯಕ್ಷರು: ನೀವೇ ಮಾತನಾಡಿಕೊಳ್ಳುತ್ತಿರುವುದು ಚರ್ಚೆಯೇ? ಏನು ಇದೆಲ್ಲ. ಒಂದು ನಿಮಿಷ ಕುಳಿತುಕೊಳ್ಳಿ. ಈಗ ಕಾನೂನು ಸಚಿವರು ಹೇಳಿದ್ದರಲ್ಲಿ ಒಂದು ಸತ್ಯಾಂಶ ಕಂಡುಬರುತ್ತದೆ, ಕಾರಣವೇನೆಂದರೆ, ಒಂದು ಸರ್ಕಾರದ ಪಾಲಿಸಿ ವಿಚಾರವನ್ನು ನಾವು adjournment motion ಮೂಲಕ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲವೆಂದು ಹಿಂದೆ ಈ ಸದನದಲ್ಲಿ ಕೆಲವು ತೀರ್ಮಾನಗಳು ಬಂದಿವೆ. ಇದು ಸರ್ಕಾರದ ನೀತಿಯ ಪ್ರಶ್ನೆ, ಆಕಾರ್ಯಕ್ರಮ ಜಾರಿಗೆ ಬಂದಿದೆ. ನೀವು ಬೇರೆ ರೂಪದಲ್ಲಿ ಅದು ಸರಿ ಇದೆ ಇಲ್ಲವೆಂದು ಹೇಳುವುದು ಬೇಡ, ಇದು adjournment motion ಮೂಲಕ ತರುವಂಥ ಪ್ರಕರಣ ಇದಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು: ನಾನು ನಿಮಗೆ ಏನು ಹೇಳಬೇಕೊ ಅರ್ಥವಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಇಂತಹ ವಿಷಯಗಳು ಸದನದಲ್ಲಿ ಹಲವಾರು ಬಾರಿ ಬಂದಿದೆ ಮಾನ್ಯ ಅಧ್ಯಕ್ಷರೆ, ಸರ್ಕಾರದ ಪಾಲಿಸಿ, ಸರ್ಕಾರದ ಯೋಜನೆ, ಸರ್ಕಾರದ ಬಜೆಟ್ ಘೋಷಣೆ ಎಂದು ಹೇಳುವುದನ್ನು ಒಪ್ಪಿಕೊಳ್ಳುತ್ತೇವೆ, ಆದರೆ ತಮಗೆ ಅಧಿಕಾರವಿದೆ, ಇಲ್ಲಿ ಯಾವುದೇ

ರೂಪದಲ್ಲಿ ಮುಖ್ಯವಾಗಿ ಚರ್ಚೆಯಾಗಬೇಕು ರೂಲ್ 69, ಮತ್ತೊಂದು ರೂಪದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುವುದಕ್ಕೆ ತಮಗೆ ಅಧಿಕಾರವಿದೆ ನಾವು ಪ್ರಸ್ತಾಪ ಮಾಡುತ್ತೇವೆ ಆಮೇಲೆ ತಾವು ಯಾವುದೇ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಆಯಿತು ಅದನ್ನು ಚರ್ಚೆ ಮಾಡೋಣ.

ಶ್ರೀ ಟಿ.ಬಿ. ಜಯಚಂದ್ರ: ಅವರೇ ನೇರವಾಗಿ ನಿಯಮ 69ರ ಅಡಿಯಲ್ಲಿ ತರಲಿ ಚರ್ಚೆ ಮಾಡೋಣ, ಇದನ್ನು ನಿಲುವಳಿ ಸೂಚನೆಯಲ್ಲಿ ತಂದರೆ ಸದನ ಹೇಗೆ ನಡೆಯುವುದು?

ಅಧ್ಯಕ್ಷರು: ಅವತ್ತೆ ನಾನು ಹೇಳಿದ್ದೇನೆ. ಮೊನ್ನೆ ಮಾನ್ಯ ಯಡಿಯೂರಪ್ಪನವರು ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ನಾನೇ ಹೇಳಿದ್ದೇನೆ ಅವಕಾಶ ಕೊಡುತ್ತೇನೆ

ಶ್ರೀ ಜಗದೀಶ್ ಶೆಟ್ಟರ್: ಅವಕಾಶ ಕೊಡಿ

ಅಧ್ಯಕ್ಷರು: ಅವಕಾಶ ಕೊಡುತ್ತೇನೆ. ಅವತ್ತೆ ಹೇಳಿದ್ದೇನೆ, ಚರ್ಚೆಗೆ ಅವಕಾಶದವಿದೆ, ಕೊಡೋಣ ಪ್ರಶ್ನೋತ್ತರವಾಗಲಿ ನೀವು ಕುಳಿತುಕೊಳ್ಳಿ

(ಗೊಂದಲ)

ಮಾನ್ಯ ಸದಸ್ಯರೊಬ್ಬರು: ಮಾನ್ಯ ಅಧ್ಯಕ್ಷರೆ, ಇಲ್ಲಿ ಯಾರು ಯಾರ ಪರವಾಗಿ ವಕಾಲತ್ ವಹಿಸುತ್ತಿದ್ದಾರೆನ್ನುವುದು ಗೊತ್ತಾಗುತ್ತಿಲ್ಲ

2) ಎಂ.ಇ.ಎಸ್ ಸದಸ್ಯರು ಕರ್ನಾಟಕದ ಬಗ್ಗೆ ನೀಡಿರುವ ಹೇಳಿಕೆ.

ಶ್ರೀ ಎಸ್. ಸುರೇಶ್ ಕುಮಾರ್: ನಿನ್ನೆ ಈ ಸದಸ್ಯರೊಬ್ಬರು ನಾಲ್ಕು ಜನರಿದ್ದಾರೆ ಕರ್ನಾಟಕ ಸರ್ಕಾರದ ಶವವನ್ನು ನಾವು ಹೊರುತ್ತೇವೆಂದು ಹೇಳಿದ್ದಾರೆ ಇಡೀ ರಾಜ್ಯದಲ್ಲಿ ಇದರ ಬಗ್ಗೆ ತೀವ್ರವಾದ ಪ್ರತಿಕ್ರಿಯೆ ಹರಡುತ್ತಿದೆ. ಅದಕ್ಕೊಸ್ಕರ ನಾನು ಸಭಾನಾಯಕರಾದ ಮುಖ್ಯಮಂತ್ರಿಗಳನ್ನು ಇದರ ಬಗ್ಗೆ ಗಮನ ಸೆಳೆಯುತ್ತಾ, ದಯವಿಟ್ಟು ಈ ರಿತಿಯ ಪ್ರಸಂಗಗಳು